# ಅದ್ಭುತ ಕಲಾಕಾರ!

**ಮೊದಲು ತಟ್ಟೆಯಾಕಾರವಿದ್ದ ಗೂಡು ಕೆಲ ದಿನಗಳಲ್ಲಿಯೇ ಬೋರಲು ಹಾಕಿದ ಬೋಗುಣಿಯಾಕಾರಕ್ಕೆ ಬಂತು. ಆ ಬಳಿಕ ಆಧುನಿಕ ದುಂಡನೆಯ ಅಲಂಕಾರಿಕ ವಿದ್ಯುತ್ ದೀಪದಂತೆ, ದುಂಡನೆಯ ಆಕಾಶಬುಟ್ಟಿಯಂತೆಯೂ ಕಂಡಿತು**

★ ಚಿತ್ರ- ಬರಹ: **ಸಿದ್ಧರಾಮ ಹಿರೇಮಠ, ಕೂಡ್ಲಿಗಿ**

ಬೆಳಿಗ್ಗೆ ಬಾಗಿಲು ತೆರೆದು ಮನಿಪ್ಲ್ಯಾಂಟ್ ನೋಡುತ್ತಿರಬೇಕಾದರೆ ಆಕಸ್ಮಿಕವಾಗಿ ಎಲೆಗಳ ಮಧ್ಯೆ ಟೊಂಗೆಗೆ ಅಂಟಿಕೊಂಡಂತೆ ಬೆಳ್ಳನೆಯ ದುಂಡಾದ ವಸ್ತುವೊಂದು ಕಂಡಿತು. ಅಚ್ಚರಿಯಿಂದ ಗಮನಿಸಿದರೆ, ಕೊಳವೆಯಾಕಾರದಲ್ಲಿ ಸಣ್ಣ ಗೂಡುಗಳು ಕಂಡವು. ಅದರ ಮೇಲೆ ಬಿಳಿ ಮಣ್ಣಿನಿಂದ ಮಾಡಿದಂತೆ ತಟ್ಟೆಯಾಕಾರ!

ಕಿವಿಯ ಪಕ್ಕದಲ್ಲಿಯೇ ಗುಂಯ್ ಎಂಬ ರೆಕ್ಕೆ ಸದ್ದು ಕೇಳಿಬಂದು ದೂರ ಸರಿದೆ. ಅರೆ! ಕಣಜವೊಂದು ಆ ತಟ್ಟೆಯ ಮೇಲೆ ಕುಳಿತುಕೊಂಡಿತು. ಇದೇನು ಮಾಡಬಹುದೆಂದು ನೋಡಿದೆ. ಕಣಜ ತಟ್ಟೆಯಾಕಾರವನ್ನು ಸುತ್ತುವರಿದು ಗೂಡು ರಚಿಸುತ್ತಿದೆ. ಇದೇನೋ ವಿಶೇಷವಿದೆ ಎಂದು ಕ್ಯಾಮೆರಾ ತಂದು ಕ್ಲಿಕ್ಕಿಸಿದೆ. ಪ್ರತಿದಿನ ಆ ಗೂಡನ್ನು, ಅದರೊಳಗಿನ ಕೊಳವೆಯಾಕಾರದ ಕೋಶಗಳನ್ನು ಗಮನಿಸುವುದು, ಕ್ಲಿಕ್ಕಿಸುವುದೇ ಒಂದು ಕೆಲಸವಾಯಿತು. ಸುಂದರವಾದ ಹೊಂಬಣ್ಣದ ಕಣಜ ಗುಂಯ್ ಎಂದು ಹಾರಿಬರುವುದು ಅದರ ಮೇಲೆ ಕುಳಿತು ತನ್ನ ಪುಟ್ಟ ದವಡೆಯಿಂದ ಗೂಡನ್ನು ಕಟ್ಟತೊಡಗಿತು!

ಮೊದಲು ತಟ್ಟೆಯಾಕಾರವಿದ್ದ ಗೂಡು ಕೆಲ ದಿನಗಳಲ್ಲಿಯೇ ಬೋರಲು ಹಾಕಿದ ಬೋಗುಣಿಯಾಕಾರಕ್ಕೆ ಬಂತು. ಆ ಬಳಿಕ ಆಧುನಿಕ ದುಂಡನೆಯ ಅಲಂಕಾರಿಕ ವಿದ್ಯುತ್ ದೀಪದಂತೆ, ದುಂಡನೆಯ ಆಕಾಶಬುಟ್ಟಿಯಂತೆಯೂ ಕಂಡಿತು.  ಒಮ್ಮೊಮ್ಮೆ ಕ್ಲಿಕ್ಕಿಸುವುದನ್ನೇ ಮರೆತು ಕಣಜವನ್ನೇ ನೋಡುತ್ತ ನಿಂತುಬಿಡುತ್ತಿದ್ದೆ. ಅದರ ಬಣ್ಣ, ಮೈಮಾಟ, ಅದರ ಪಟ್ಟೆಗಳು, ಉದ್ದನೆಯ ಸುಂದರ ರೆಕ್ಕೆ! ಕೊನೆಗೂ ಕಣಜ ಅಂತಿಮ ಸ್ಪರ್ಶ ನೀಡಿತು. ಇದೀಗ ಅದರ ಗೂಡು ಬೋರಲು ಹಾಕಿದ ಮಡಕೆಯಂತೆ, ಕೊಂಚ ಹೂಜಿಯಂತೆಯೂ ಕಂಡುಬಂತು. ಇದೇ ಅಂತಿಮ. ಒಳಗೆ ಸೂಕ್ಷ್ಮವಾಗಿ ಇಣುಕಿ ನೋಡಿದರೆ, ಅದರಲ್ಲಾಗಲೇ ಕಣಜ ಕೋಶಗಳಲ್ಲಿ ಲಾರ್ವಾಗಳನ್ನು ಇರಿಸಿತ್ತು.

ಕನ್ನಡದಲ್ಲಿ ಇದು ಕುಂಬಾರ ಕಣಜ. ಕಡಜೀರಗೆ ಹುಳು ಎಂದೂ ಹೆಸರಿದೆ. ಇಂಗ್ಲಿಷ್‌ನಲ್ಲಿ 'ಪಾಟರ್ ವ್ಯಾಸ್ಪ್' ಎನ್ನುತ್ತಾರೆ. ಇದರಲ್ಲಿಯೇ 400–500 ಪ್ರಬೇಧಗಳಿವೆ. ಸಾಮಾನ್ಯವಾಗಿ ಒಂಟಿಯಾಗಿಯೇ ಜೀವಿಸುವ ಕಣಜಗಳು ರೈತನಿಗೆ ಉಪಕಾರಿ. ಜೇನುನೊಣಗಳ ರೀತಿಯಲ್ಲಿಯೇ ಇರುವ ಇವುಗಳ ಮೈಬಣ್ಣ, ಪಟ್ಟೆಗಳು ಆಕರ್ಷಣೀಯ. ಗೂಡನ್ನು ಕೆಸರು, ಉಸುಕು, ಸಸ್ಯಾವಶೇಷಗಳಿಂದ, ಜೊಲ್ಲನ್ನು ಸೇರಿಸಿ ಮಡಕೆಯಾಕಾರದಲ್ಲಿ ಕಟ್ಟುವುದರಿಂದಲೇ ಇದಕ್ಕೆ ಕುಂಬಾರ ಕಣಜ ಎಂದು ಹೆಸರು ಬಂದಿದೆ.

ಸಣ್ಣ ಕೀಟಗಳು ಇದರ ಆಹಾರ. ಹೂವಿನ ಮಕರಂದವನ್ನೂ ಕುಡಿಯುವುದರಿಂದ ಕಣಜಗಳಿಂದ ಪರಾಗಸ್ಪರ್ಶ ಕ್ರಿಯೆಯೂ ನಡೆಯುತ್ತದೆ. ಹೀಗಾಗಿ ಇವು ರೈತನಿಗೆ ಉಪಕಾರಿಯೇ ಆಗಿವೆ. ಬೆಳೆದ ವಯಸ್ಕ ಕಣಜ ಮಡಕೆಯಾಕಾರದಲ್ಲಿ ಗೂಡನ್ನು ನಿರ್ಮಿಸಿ, ಅದರೊಳಗಿನ ಕೋಶಗಳಲ್ಲಿ ಮೊದಲು ನಿಷ್ಕ್ರಿಯೆಗೊಳಿಸಿದ ಸಣ್ಣ ಜೇಡ, ಕಂಬಳಿಹುಳುಗಳನ್ನು ಸೇರಿಸುತ್ತದೆ. ನಂತರ ತನ್ನ ಗರ್ಭದೊಳಗೇ ಮೊಟ್ಟೆಯೊಡೆದು ಲಾರ್ವಾ ಸ್ಥಿತಿಯಲ್ಲಿರುವ ಮರಿಗಳನ್ನು ಕೋಶಗಳೊಳಗೆ ಸೇರಿಸುತ್ತದೆ. ಲಾರ್ವಾದಿಂದ ಹೊರಬಂದ ಮರಿ ಕಣಜ ಜೇಡ ಅಥವಾ ಕಂಬಳಿಹುಳುವನ್ನು ತಿಂದು ಪೂರ್ಣವಾಗಿ ಬೆಳೆದು ಗೂಡಿನಿಂದ ಹೊರಬರುತ್ತದೆ. ಕಣಜಗಳು ಸಾಮಾನ್ಯವಾಗಿ ಗೂಡನ್ನು ಗಿಡಗಳ ಮರೆಯಲ್ಲಿ, ಮನೆಯ ಚಾವಣಿಯಲ್ಲಿ, ನೆರಳಿನಲ್ಲಿ ಕಟ್ಟುತ್ತವೆ.



ಗೂಡಿನ ಆರಂಭದ ಹಂತ ತಟ್ಟೆಯಾಕಾರದಲ್ಲಿ



ಗೂಡಿಗೆ ಅಂತಿಮ ಸ್ಪರ್ಶ ನೀಡುತ್ತಿರುವ ಕುಂಬಾರ ಕಣಜ



ಪೂರ್ಣಗೊಂಡ ಅದ್ಭುತ ಗೂಡು